◆ **ನಿಮ್ಮ ಕಲಾಕೃತಿಗಳಲ್ಲಿ ದೂಳು-ಕೆಸರು ಬಹಳ ಕಡೆ ಬರುತ್ತೆ. ದೂಳು ಹೀರುವ ಯಂತ್ರದ ಶಿಲ್ಪದಲ್ಲೂ ಅದಿದೆ.**

ಅದಕ್ಕೆ ಪ್ರೇರಣೆ ಬಂದಿದ್ದು ಮುಂಬೈಯಲ್ಲಿ. ಭಾಹುದಾಜಿ ಲಾಡ್ ಮ್ಯೂಸಿಯಂನವರು, ಅಲ್ಲಿರೋ ವಸ್ತುಗಳ ಜೊತೆ ರೆಸ್ಪಾಂಡ್ ಮಾಡಿ, ಕಲಾಕೃತಿಯನ್ನ ರಚಿಸ್ಲಿಕ್ಕೆ ಆಗ್ತದಾ ಅಂತ ಕೇಳಿದ್ರು. ನಾನು ಹತ್ತಿಪ್ಪತ್ತು ಕಲಾಕೃತಿಗಳನ್ನ ರಚಿಸಿದೆ. ಅದರಲ್ಲಿ ಇದೂ ಒಂದು. ಭಾರತದ ಯಾವುದೇ ಕಲೊನಿಯಲ್ ಮ್ಯೂಸಿಯಂಗೆ ಹೋದ್ರೆ ತುಂಬಾ ದೂಳು ಕಾಣಿಸುತ್ತೆ. ನಮ್ಮ ದೇಶದ ಯಾವುದೇ ಸಿಟಿಗೆ ಹೋದರೂ ಇದು ಸಾಮಾನ್ಯ. ನಮ್ಮ ಶಾಸ್ತ್ರಗಳಲ್ಲಿ ಸಹ ಹೇಳಿದೆ – ಕಣ ಕಣದಲ್ಲೂ ದೇವರಿದ್ದಾನೆ, ಅವನನ್ನು ಕಾಣು ಅಂತ. ಹಾಗೆ ಯಾಕೆ ದೂಳನ್ನು ಒಂದು ಕಲಾಕೃತಿಯಾಗಿ ನೋಡಬಾರದು ಅಂತ ಒಂದು ಆಲೋಚನೆ ತಲೇಲಿತ್ತು. ಅದಕ್ಕೆ ಮ್ಯೂಸಿಯಂನಿಂದ ಒಂದು ಶೋಕೇಸ್ ತೆಕ್ಕೊಂಡು ಅದನ್ನೊಂದು ವ್ಯಾಕ್ಯೂಮ್ ಕ್ಲೀನರ್ ಆಗಿ ಬದಲಾಯಿಸಿದೆ. ಅದಕ್ಕೆ ಚಕ್ರ ಅಳವಡಿಸಿದೆ. ಅದು ಇಡೀ ಮ್ಯೂಸಿಯಂ ಸುತ್ತಾಡಿ ಎಲ್ಲಾ ಕಡೆ ಕ್ಲೀನ್ ಮಾಡಿ ಡಸ್ಟನ್ನು ಹೊಟ್ಟೆಯೊಳಗೆ ಹಾಕುವಂತಹ ಒಂದು ಕಲ್ಪನೆಯನ್ನು ತೆಕ್ಕೊಂಡ್ ಬಂದೆ. ಶೋಕೇಸಿನ ಒಳಗೆ ಲೈಟಿಂಗ್ ಮಾಡಿದೆ. ಅದನ್ನು ಪ್ರತೀ ಸಲ ಆನ್ ಮಾಡಿದಾಗ ಮ್ಯೂಸಿಯಂನ ದೂಳು ಎದ್ದು ಕಾಣಿಸ್ತದೆ.

◆ **ನಿಮ್ಮ 'ಫ್ರಿಂಜ್ ಎಲಿಮೆಂಟ್' ಕುತೂಹಲಕರವಾಗಿದೆ. ಉಗ್ರದೇವತೆಗಳ ಶಿಲ್ಪದಲ್ಲಿ, ಪಕ್ಕ ಮತ್ತು ಕೆಳಗಡೆ ಇರುವ ಪರಿವಾರದ ಶಿಲ್ಪ ಇಟ್ಟುಕೊಂಡು ವರ್ಕ್ ಮಾಡಿದ್ದೀರಿ. ಆಧುನಿಕ ಕಲಾವಿದರಾಗಿ ಪರಂಪರೆಯ ಶಿಲ್ಪಗಳ ಪ್ರೇರಣೆಯಿಂದ ಕೃತಿಸೃಷ್ಟಿ ಮಾಡುವಾಗ ಯಾವ ಕಲ್ಪನೆ ಕೆಲಸ ಮಾಡುತ್ತೆ?**

ಹಿಂದೆ ಪ್ರತಿಯೊಬ್ಬ ಕಲಾವಿದನಿಗೂ ಕಲಾಕೃತಿ ರಚಿಸಲಿಕ್ಕೆ ಶಿಲ್ಪಶಾಸ್ತ್ರದಲ್ಲಿ ನಿಯಮಗಳಿವೆ, ಎತ್ತರ ಗಾತ್ರ ಎಷ್ಟಿರಬೇಕು, ಭಂಗಿ ಹೇಗಿರಬೇಕು ಇತ್ಯಾದಿ. ಆದರೆ, ಕಲಾವಿದನಿಗೆ ನಿಯಮಗಳ ವ್ಯವಸ್ಥೆಯನ್ನು ಮುರಿಯುವುದು ಬಹಳ ಮುಖ್ಯ. ಇಟ್ಸ್ ಅನ್ ಇಂಟರ್ನಲ್ ಅರ್ಜ್. ನನಗೆ ಒಂದು ವ್ಯವಸ್ಥಿತವಾದ ಕೆಲಸ ಕೊಟ್ಟರೆ, ಅದರಲ್ಲಿ ಏನಾದರೂ ಒಂದು ಕೀಟಲೆ ಅಥವಾ ಫ್ರಿಂಜ್ ಎಲಿಮೆಂಟ್ ಮಾಡೇ ಮಾಡ್ತೇನೆ.

◆ **ಇದು ಕಲಾನಿಯಮಗಳ ಒಳಗೆ ಸೃಜನಶೀಲ ಸ್ವಾತಂತ್ರ್ಯ ಪ್ರಕಟಿಸುವುದಕ್ಕೆ ಕಲಾವಿದರು ಕಂಡುಕೊಳ್ಳುವ ಬಂಡುಕೋರ ಸ್ಪೇಸ್ ಕೂಡ.**

ಹೌದು. ನೀವು ಫೋನ್ ಮಾಡುವಾಗ ಏನೋ ಗೀಚಾಟ ಮಾಡ್ತಾ ಇರ್ತೀರಿ. ಅದು ಒಳಗಿನ ತುಡಿತ. ಅದರಂತೆ ಕಲಾಕೃತಿಯಲ್ಲಿ ಮೇನ್‌ಥೀಮ್ ಆಗಿ ಕಾಳಿಯನ್ನು ಕ್ರಮಬದ್ಧವಾಗಿ ರಚಿಸುವಾಗ, ಯಾವುದೋ ಮೂಲೆಯಲ್ಲಿ ಈ ಫ್ರಿಂಜ್ ಕಲಾಕೃತಿಯನ್ನು ಕೆತ್ತಿದ್ದಾರೆ. 15ನೇ ಶತಮಾನದ ಮಧ್ಯಪ್ರದೇಶದ ಮುರಿದ ಶಿಲ್ಪದಲ್ಲಿ ಒಂದು ಅಸ್ಥಿಪಂಜರ ಇದೆ. ಅದರಲ್ಲಿ ಒಬ್ಬನ ಕಾಲನ್ನು ಇನ್ನೊಬ್ಬ ತಿನ್ತಾ ಇದಾನೆ. ಇಟ್ಸ್ ಮೋರ್ ಲೈಕ್ ಎ ಹ್ಯೂಮನ್ ಈಟಿಂಗ್ ಅನದರ್ ಹ್ಯೂಮನ್. ಆಮೇಲೆ ಅವನು ಮೈಥುನ ಮಾಡ್ತಾ ಇರೋ ತರಹಾನೂ ಇದೆ. ಈ ಸಾಂಪ್ರದಾಯಿಕ ಕಲಾಕೃತಿ ರಚಿಸುವಾಗ ಮೂಲೆಯಲ್ಲಿ ತಮ್ಮ ವೈಯಕ್ತಿಕ ಎಕ್ಸ್‌ಪ್ರೆಶನನ್ನೂ ಕೆತ್ತುತಾ ಇದ್ದರು. ಇದನ್ನು ಎಲ್ಲೆಲ್ಲಿ ಸಾಧ್ಯತೆ ಇದೆಯೋ ಅಲ್ಲೆಲ್ಲ ಮಾಡಿದ್ದಾರೆ. ಹೀಗೆ ಫ್ರಿಂಜ್ ಆಗಿ ಕಂಡರೂ ಅವು ನನಗೆ ಮುಖ್ಯವಾಗಿ ಕಂಡವು.

◆ **ಪ್ರಕೃತಿ ಮತ್ತು ಪರಂಪರೆ ಜೊತೆಗೆ ಅನುಸಂಧಾನ ಮಾಡಿದಂತೆ, ನೀವು ಆಧುನಿಕ ಯಂತ್ರಗಳ ಜತೆಗೂ ಕೆಲಸ ಮಾಡ್ತೀರಿ – ನಾಣ್ಯ, ಮೊಳೆ ಗರಗಸ ಇತ್ಯಾದಿ. ಇದೇ ತರಹ ಹುಳುಗಳ ಜತೆಗೂ ಕೆಲಸ ಮಾಡಿದೀರಿ. ಇದರ ಅನುಭವ ಹಂಚಿಕೊಳ್ಳಿ.**

ಇದಕ್ಕೆ ಕೂಡ ಪ್ರೇರಣೆ ಮ್ಯೂಸಿಯಂನಿಂದಲೇ. ಮ್ಯೂಸಿಯಂನಲ್ಲಿರುವ ಆನೆಯ ಅಥವಾ ಬೇರೆ ಪ್ರಾಣಿಗಳ ಅಸ್ಥಿಪಂಜರ ಏನಿದೆ, ಅವುಗಳನ್ನ ಮಾಡೊ ವಿಧಾನ ವಿಶೇಷವಾಗಿದೆ. ಒಂದು ದೊಡ್ಡ ಹೊಂಡ ಮಾಡಿ ಸತ್ತ ಆನೆಯನ್ನ ಅದರೊಳಗೆ ಹಾಕ್ತಾರೆ. ಆಮೇಲೆ ಡರ್ಮಿಸ್ಟೂಲ್ ಬೀಟಲ್ ಅಂತ ಮಾಂಸ ತಿನ್ನುವ ಸಣ್ಣ ಹುಳಗಳನ್ನು ಅದರೊಳಗೆ ಬಿಡ್ತಾರೆ. ಒಂದು ವಾರದಲ್ಲಿ ಅವು ದೊಡ್ಡ ಕೊಲನಿಯಾಗಿ ಮಾರ್ಪಟ್ಟು ಮಾಂಸವನ್ನು ಸಂಪೂರ್ಣ ತಿಂದು